ಅಸಲು ದಾವಾ ನಂಃ 23 /2022
ಡಿ ಡಬ್ಲ್ಯುಃ1

<u>ದಿನಾಂಕಃ **20-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿಎಲ್ಎಸ್ ವಕೀಲರಿಂದಃ</u>

1 ನೇ ಪ್ರತಿವಾದಿ ನನ್ನ ತಂದೆ. 2 ನೇ ಪ್ರತಿವಾದಿ ನನ್ನ ತಾಯಿ. 4 ನೇ ಪ್ರತಿವಾದಿ ನನ್ನ ತಂಗಿ. 5 ನೇ ಪ್ರತಿವಾದಿ ನನ್ನ ದೊಡ್ಡಪ್ಪ. 6 ನೇ ಪ್ರತಿವಾದಿ ನನ್ನ ದೊಡ್ಡಮ್ಮ ಎಂದರೆ ಸರಿ. ದಾವಾ ಆಸ್ತಿಗಳಿಗೆ ನಾವು ಆರು ಜನ ಜಂಟಿ ಮಾಲೀಕರು ಇರುತ್ತೇವೆ ಎಂದರೆ ಸರಿ. ದಿಃ 19.07.2018 ರಂದು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡುತ್ತೇವೆ ಎಂದು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರ ಆಗುವ ಕಾಲಕ್ಕೆ 4 ನೇ ಪ್ರತಿವಾದಿ ಅಲ್ಪ ವಯಸ್ಕಳು ಇದ್ದು ನಮ್ಮ ತಂದೆ ಅವರ ಪರವಾಗಿ ಪ್ರತಿನಿಧಿಸಿದ್ದರು ಎಂದರೆ ಸರಿ. ಕರಾರು ಪತ್ರ ಆದ ದಿವಸ ನಾವು ಮುಂಗಡವಾಗಿ 40 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಿಪಿ-2 ರ 5 ನೇ ಖಂಡಿಕೆ ಪ್ರಕಾರ ನಮೂದಿಸಿದ ವಿಚಾರ ಸರಿಯಾಗಿರುತ್ತದೆ ಎಂದರೆ ಸರಿ. ನಿಪಿ-2 ರ ಖಂಡಿಕೆ 4 ರಲ್ಲಿ ಬರೆದ ವಿಚಾರಗಳು ಸರಿಯಾಗಿರುತ್ತವೆ.

2. ಫೆಬ್ರವರಿ 2022 ರ ಒಳಗಾಗಿ ಖಂಡಿಕೆ 5 ನಿಪಿ-2 ರಲ್ಲಿ ನಮೂದಿಸಿದ ದಾಖಲೆಗಳನ್ನು ನಾವು ಕೊಟ್ಟ ಬಗ್ಗೆ ಯಾವುದೇ ಪುರಾವೆ ಇರುವುದಿಲ್ಲ ಎಂದರೆ ಸಾಕ್ಷಿ 4 ತಿಂಗಳ ಒಳಗಾಗಿ ಶೇಕಡಾ 90 ರಷ್ಟು ದಾಖಲೆಗಳನ್ನು ಹಾಗೂ ಆಧಾರ್ ಖಲಾಸೆ ಪತ್ರಗಳನ್ನು ಡಿಸಂಬರ್ 2018 ರಲ್ಲಿ ಮಾಡಿಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಈ ರೀತಿ ನಾನು ಎಲ್ಲಾ ದಾಖಲೆಗಳನ್ನು ಒದಗಿಸಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಮ್ಯುಟೇಷನ್ ಮತ್ತು ಪೋಡಿ ದುರಸ್ತು, ಆಧಾರ್ ಖುಲಾಸ್ ಪತ್ರ, ಹಾಗೂ ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಈ ರೀತಿ ದಾಖಲೆಗಳನ್ನು ಹಾಜರು ಪಡಿಸದೇ ಇದ್ದರೂ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫೆಬ್ರವರಿ 2022 ರ ಒಳಗಾಗಿ ದಾಖಲೆಗಳನ್ನು ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ರೀತಿ

ದಾಖಲೆಗಳನ್ನು ಹಾಜರು ಪಡಿಸದೇ ಇದ್ದರೂ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾವು ವಾದಿಗೆ ನೋಂದಣಿಗೆ ಬೇಕಾದ ದಾಖಲೆಗಳನ್ನು ಕೊಡದೇ ಅವರ ಕಡೆಯಿಂದ ಬಾಕಿ ಕ್ರಯದ ಹಣವನ್ನು ಕೊಡುವಂತೆ ಕೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 19.07.2018 ರಂದು ರೂ.20 ಲಕ್ಷ ರೂಪಾಯಿ ಹಣವನ್ನು ಚಕ್ ಮೂಲಕ ನಮ್ಮ ತಂದೆಗೆ, ದಿಃ 18.03.2019 ರಂದು ತಲಾ 10 ಲಕ್ಷದಂತೆ ಹಣವನ್ನು ಚಕ್ ಮೂಲಕ ನಮ್ಮ ತಂದೆಗೆ ಹಾಗೂ ದಿಃ 29.06.2019 ರಂದು ರೂ.8 ಲಕ್ಷ ಹಣವನ್ನು ಚಕ್ ಮೂಲಕ ನಮ್ಮ ತಂದೆಗೆ ಹಣ ವರ್ಗಾವಣೆ ವಾದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಹಣ ಕ್ರಯದ ಕರಾರಿಗೆ ಸಂಬಂಧಪಟ್ಟಿದ್ದು ಇರುವುದಿಲ್ಲ ಆದರೆ ಕಿರಣ್ ದೃವ ಇವರ ವ್ಯವಹಾರಕ್ಕೆ ಸಂಬಂಧಿಸಿದ ಹಣ ಎಂದು ಉತ್ತರಿಸಿರುತ್ತಾರೆ. ಸದರಿ ರೂ.38 ಲಕ್ಷ ಹಣ ನಮ್ಮ ತಂದೆಯ ಕರ್ನಾಟಕ ಬ್ಯಾಂಕ್ ಖಾತೆಗೆ ಬಂದಿರುತ್ತದೆ. ಸದರಿ ನಮ್ಮ ತಂದೆಯ ಕರ್ನಾಟಕ ಬ್ಯಾಂಕ್ ಖಾತೆಯ ಅಕೌಂಟ್ ಎಕ್ಸ್ಟ್ರಾಕ್ಟ್ ಅನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಸದರಿ ಈ ಮೊತ್ತವ್ನು ಕ್ರಯದ ಕರಾರು ಸಂಬಂಧ ಪಡೆದುಕೊಂಡಿದ್ದರೂ ಸಹ ನಾನು ಬೇರೆ ವ್ಯವಹಾರದ ಹಣ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಹೇಳಿದಂತಹ ಕಿರಣ್ ದೃವ ಇವರು ವಾದಿಯ ಮಗ ಇರುತ್ತಾರೆ ಎಂದರೆ ಸರಿ. ಕಿರಣ್ ದೃವ ಮತ್ತು ನಮ್ಮ ತಂದೆಯ ನಡುವೆ ಬೇರೆ ವ್ಯವಹಾರ ಇತ್ತು ಎಂಬುದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಿನಾಂಕ 18.03.2019 ರಂದು ರೂ.10 ಲಕ್ಷ ವನ್ನು ನಮ್ಮ ತಂದೆಯವರು ಚಕ್ ಮೂಖಾಂತರ ಹಣ ಪಡೆದುಕೊಂಡ ಬಗ್ಗೆ ನಿಪಿ-5 ರಂತೆ ರಶೀದಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-5 ಅನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ತಂದೆ ಮತ್ತು ತಾಯಿಯ ಸಹಿ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-2 ರಲ್ಲಿ ನಮ್ಮ ತಂದೆ ಮತ್ತು ತಾಯಿಯ ಸಹಿ ಇರುತ್ತದೆ ಎಂದರೆ ಸರಿ. ದಿನಾಂಕ 29.06.2019 ರಂದು ರೂ.8 ಲಕ್ಷ ವನ್ನು ನಮ್ಮ ತಂದೆಯವರು ಚಕ್ ಮೂಖಾಂತರ ಹಣ ಪಡೆದುಕೊಂಡ ಬಗ್ಗೆ ನಿಪಿ-7 ರಂತೆ ರಶೀದಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕರಾರು ಪತ್ರಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಆದರೆ ಬೇರೆ ವ್ಯವಹಾರದ್ದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ

ಪ್ರತಿವಾದಿ 1 ರವರು ಸಲ್ಲಿಸಿದ ವಕಾಲತ್ ನಲ್ಲಿ ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಸಹಿ ನಮ್ಮ ತಂದೆಯದು ಎಂದು ಒಪ್ಪಿ ಕೊಂಡಿರುತ್ತಾರೆ. ದಿಃ 18.03.2019 ರಂದು ನನ್ನ ದೊಡ್ಡಪ್ಪ ಮತ್ತು ದೊಡ್ಡಮ್ಮ ರೂ.10 ಲಕ್ಷವನ್ನು ಪಡೆದುಕೊಂಡ ಬಗ್ಗೆ ರಶೀದಿಯನ್ನು ನಿಪಿ-6 ರಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 10 ಲಕ್ಷ ಹಣ ನಮ್ಮ ದೊಡ್ಡಪ್ಪನ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸಾಕ್ಷಿ ಆಗಿರಬಹುದು ಆದರೆ ಅವರದು 3 ಎಕ್ರೆ ಆಸ್ತಿ ಇದ್ದು ಅದರಲ್ಲಿ ಮರಗಳು ಇದ್ದವು ಎಂದು ಉತ್ತರಿಸಿರುತ್ತಾರೆ. ನಿಪಿ-6 ರಲ್ಲಿ ಮರದ ವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಹಿಂಬರಹ ಇರುವುದಿಲ್ಲ ಎಂದರೆ ಸಾಕ್ಷಿ ನಾಹಿ ಹಿಂಬರಹ ಬರೆದುಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ.

5. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕರಾರು ಪತ್ರ ಆಗುವ ಪೂರ್ವದಲ್ಲಿ ಎಂ.ಆರ್. ಪದ್ಮನಾಭ ಇವರಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ವಾದಿ ನೋಟೀಸ್ ನೀಡಿದ ನಂತರ ನಾವು ದಿಃ 06.06.2022 ರಂದು ಪವನ್ ಕುಮಾರ್ ಎನ್ನುವವರ ಜೊತೆ ದಾವಾ ಆಸ್ತಿಯ ಸಂಬಂಧ ನೋಂದಾಯಿತ ಕರಾರು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಫೆಬ್ರವರಿ 2022 ರಲ್ಲಿ ನಾವು ವಾದಿಗೆ ಕರಾರು ಪತ್ರ ರದ್ದುಪಡಿಸುವುದಾಗಿ ನೋಟೀಸ್ ನೀಡಿದ್ದು ಹಾಗೂ 15 ದಿನದೊಳಗೆ ನೋಂದಣಿಗೆ ಬರದೇ ಇರುವ ಕಾರಣ ನಾವು ಪವನ್ ಕುಮಾರ್ ಇವರ ಜೊತೆ ಕರಾರು ಪತ್ರ ಮಾಡಿಕೊಂಡು 2024 ರಲ್ಲಿ ಸದರಿ ಕರಾರು ಪತ್ರವನ್ನು ರದ್ದು ಪಡಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಾವು ಪವನ್ ಕುಮಾರ್ ಜೊತೆ ವಾದಿಯ ಜೊತೆ ಆದ ಕರಾರು ಪತ್ರವನ್ನು ಮುಚ್ಚಿ ಟ್ಟಿದ್ದು ನಂತರ ಅವರಿಗೆ ಗೊತ್ತಾದ ನಂತರ ಅವರು ಕ್ರಿಮಿನಲ್ ಪ್ರಕರಣ ದಾಖಲು ಮಾಡುತ್ತೇವೆ ಎಂದು ಹೇಳಿದ ನಂತರ ನಾವು ಕರಾರು ಪತ್ರವನ್ನು ರದ್ದುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಪವನ್ ಕುಮಾರ್ ಇವರಿಗೆ ಬರೆದುಕೊಟ್ಟ ಕರಾರು ಪತ್ರದಲ್ಲಿ ವಾದಿಗೆ ಆದ ಕ್ರಯದ ಕರಾರು ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಮೌಖಿಕವಾಗಿ ಹೇಳಿದ್ದೆವು ಎಂದು ಉತ್ತರಿಸಿರುತ್ತಾರೆ.

6. ವಾದಿಯ ಜೊತೆ ಕರಾರು ಪತ್ರ ಆದ ವಿಚಾರವನ್ನು ನಾವು ಪವನ್ ಕುಮಾರ್ ಇವರ ಜೊತೆ ಮಾಡಿಕೊಂಡ ಕ್ರಯದ ಕರಾರು ಪತ್ರದಲ್ಲಿ ಹೇಳಿರುತ್ತೇವೆ. ದಿನಾಂಕಃ 12.02.2022 ರಂದು ನಾವು ನಮ್ಮ ವಕೀಲರ ಮೂಖಾಂತರ ನೋಟೀಸ್ ಕೊಡುವ

ಅಸಲು ದಾವಾ ನಂಃ 23 /2022
ಡಿ ಡಬ್ಲ್ಯುಃ1

ಪೂರ್ವದಲ್ಲಿ ನಮ್ಮ ಬಳಿದಾಖಲೆಗಳು ಇದ್ದವು ಎಂಬುದನ್ನು ತೋರಿಸುವ ಸಲುವಾಗಿ ನಾವು ಲಿಖಿತವಾಗಿ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ ಆದರೆ ವಾಟ್ಸಪ್ ನಲ್ಲಿ ಕೇಳಿರುತ್ತೇವೆ ನಾವು ವಾಟ್ಸಪ್ ಕಮಿನಿಕೇಷನ್ ಮಾಡಿಕೊಂಡ ದೂರವಾಣಿ ಸಂಃ 8762501754 ಇರುತ್ತದೆ ಎಂದರೆ ಸರಿ. ನಾವು ಕಮಿನಿಕೇಷನ್ ಮಾಡಿಕೊಂಡ ದೂರವಾಣಿ ಸಂಃ 9845020021 ಇದು ರಾಜ್‌ಗೋಪಾಲ್ ಇವರಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ರಾಜ್‌ಗೋಪಾಲ್ ಈ ದಾವೆಯ ವಾದಿಯ ಪರ ಅಧಿಕಾರ ಪತ್ರ ಹೊಂದಿದ ವ್ಯಕ್ತಿ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರೆದು ಇರಬಹುದು ಎಂದು ಉತ್ತರಿಸಿರುತ್ತಾರೆ. ರಾಜ್ ಗೋಪಾಲ್ ಇವರನ್ನು ಮೂರು ಬಾರಿ ಬೇಟಿಯಾಗಿರುತ್ತೇವೆ ಎಂದರೆ ಸಾಕ್ಷಿ ಒಂದು ಬಾರಿ ಬೇಟಿಯಾಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿಯವರನ್ನು ಒಂದು ಬಾರಿ ನಮ್ಮ ಮನೆಯಲ್ಲಿ ಬೇಟಿಯಾಗಿರುತ್ತೇನೆ. ಸದರಿ ರಾಜ್ ಗೋಪಾಲ್ ಜೊತೆ ಅವರ ವಕೀಲರು ಬಂದಿದ್ದರು ಎಂದರೆ ಸರಿ. ಮೇ 2022 ರಲ್ಲಿ ಈ ರೀತಿ ಬಂದಿದ್ದರು ಎಂದರೆ ಸಾಕ್ಷಿ ಅದಕ್ಕಿಂತ ಮುಂಚಿತವಾಗಿ ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ದಿಃ 05.02.2022 ರಂದು ನಾನು ರಾಜ್ ಗೋಪಾಲ್ ಇವರನ್ನು ಬಾಳೇಹೊನ್ನೂರಿನಲ್ಲಿ ಬೇಟಿಯಾಗಿರುತ್ತೇನೆ ಎಂದರೆ ಸರಿಯಲ್ಲ. ದಿಃ 05.02.2022 ಹಾಗೂ 01.05.2022 ರಂದು ನಾನು ವಾಟ್ಸಪ್ ಮುಖಾಂತರ ಅವರನ್ನು ಸಂಪರ್ಕಿಸಿರುತ್ತೇನೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ